pw-5

**ದಿಃ 23.11.2022 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಮಾನ್ಯ ಅಭಿಯೋಜಕರು ನುಡಿದಿರುತ್ತಾರೆ .

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

ಚಾಸಾ 01 ನನ್ನ ಅತ್ತೆ . ಈ ಪ್ರಕರಣದಲ್ಲಿ ನನಗೆ ನೋಟೀಸ್ ನೀಡಿರುವುದಿಲ್ಲ . ಆದರೆ ಊರಿಗೆ ಬಂದು ಸಹಿ ಪಡೆದುಕೊಂಡು ಹೋಗಿದ್ದರು . ನಿಪಿ – 9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ . ಅದು ಯಾವ ಕಂಪನಿಯ ಪೆನ್ ಡ್ರೈವ್ ಎಂದು ನನಗೆ ಗೊತ್ತಿಲ್ಲ . ಡಿ.ವೈ.ಎಸ್.ಪಿ. ರವರು ಪೆನ್ ಡ್ರೈವ್ ಗೆ ಸುಮಾರು ಅರ್ದ ಗಂಟೆ ಕಾಪಿ ಮಾಡಿದರು . ಪೆನ್ ಡ್ರೈವ್ ನಲ್ಲಿ ಇರುವುದನ್ನು ನಾನು ನೋಡಿದ್ದೇನೆ, ಅಡಿಕೆ ಗಿಡಗಳನ್ನು ಕಿತ್ತು , ಮೆಕ್ಕೆ ಜೋಳ ಮೇಯಿಸಿ ಗುಡಿಸಲಿಗೆ ಬೆಂಕಿ ಇಟ್ಟಿರುವುದು ಅದರಲ್ಲಿ ಇತ್ತು . ತಿಮ್ಮಜ್ಜ , ಸಣ್ಣಜ್ಜ ರವರು ಬೆಂಕಿ ಇಟ್ಟರು . ಮೊಬೈಲ್ ನಲ್ಲಿ ಅದನ್ನು ರೆಕಾರ್ಡ್ ಮಾಡಿಕೊಂಡಿದ್ದರು . ಅದು ಯಾವ ಕಂಪನಿಯ ಮೊಬೈಲ್ ಎಂದು ನನಗೆ ಗೊತ್ತಿಲ್ಲ . ಪೆನ್ ಡ್ರೈವ್ ನಲ್ಲಿ ದಿನಾಂಕ ಇದುದ್ದನ್ನು ನಾನು ಗಮನಿಸಿದ್ದೇನೆ . ಚಾಸಾ 01 ರವರ ಗಂಡ ನನ್ನ ಮಾವ . ಚಾಸಾ 03 ನನ್ನ ಮಾವ , ಚಾಸಾ 2, 7 ನನ್ನ ಅಳಿಯಂದಿರು . ನಾನು ಕಣಿವೆ ಜೋಗಿಹಳ್ಳಿಯಲ್ಲಿ ವಾಸವಾಗಿದ್ದೇನೆ , ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿದ್ದೇನೆ . ಚಾಸಾ –7, 10, 15 ರವರ ಪ್ರಸ್ತುತ ಆರೋಪಿಗಳು ಒಂದು ದೂರು ನೀಡಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತು . ದಿಃ 13.08.2021 ರಂದು ಸಂಜೆ 6 ಗಂಟೆಗೆ ನಾನು ಕಚೇರಿಯಲ್ಲಿ ನಿಪಿ –9 ಕ್ಕೆ ಸಹಿ ಮಾಡಿದ್ದೇನೆ . ಅದರಲ್ಲಿ ಬರೆದಿರುವ ಚಕ್ಕುಬಂದಿ ನನಗೆ ಗೊತ್ತಿಲ್ಲ . ಮೊಬೈಲ್ ನ್ನು ಪೋಲೀಸರಿಗೆ ನೀಡಿದರು . ಮೊಬೈಲ್ ನ್ನು ಪೋಲೀಸರು ತೆಗೆದುಕೊಂಡರು . ಅದಕ್ಕೆ ಮಹಜರ್ ಮಾಡಿ ನನ್ನ ಸಹಿ ತೆಗೆದುಕೊಂಡರು . ಈ ಪ್ರಕರಣದ ವಿಚಾರ

ನನಗೆ ತಿಳಿಯದೆ ಇದ್ದರು ಚಾಸಾ 01 ನನ್ನ ಸಂಬಂಧಿಕರಾದ್ದರಿಂದ ಅವರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ವಿಡಿಯೋ ದೃಶಾವಳಿ ನೋಡಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ –10, 11 ರವರ ಫೋಟೋವನ್ನು ಅದೇ ದಿನ ನನಗೆ ತೋರಿಸಿದರು . ಪೋಲೀಸರು ಫೋಟೋ ತೆಗೆದರು . ಮೊಬೈಲ್ ನಿಂದ ಸದರಿ ಫೋಟೋ ತೆಗೆದರು . ಯಾವ ಮೊಬೈಲ್ ನಿಂದ ಯಾವ ಪೋಲೀಸರು ಅದನ್ನು ತೆಗೆದರು ಎಂದು ಹೇಳಲು ಅಗುವುದಿಲ್ಲ ಎಂದರೆ ಸರಿ . ಅದನ್ನು ಎಲ್ಲಿ ಪ್ರಿಂಟ್ ತೆಗೆಸಿದರು ಎಂದು ನನಗೆ ಗೊತ್ತಿಲ್ಲ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.